# ಶ್ರದ್ಧೆ -ಅಂಧ ಶ್ರದ್ಧೆ

ನಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ, ಶ್ರದ್ಧೆಯಿರಬೇಕೆಂಬ ಮಾತಿನಲ್ಲಿ ಅತಿಶಯತೆಯೇನಿಲ್ಲ. ಅದು ಬದುಕಿನ ಪ್ರತಿ ಕ್ರಿಯೆಯಲ್ಲೂ ಇರಬೇಕಾದುದೇ, ಅದಿಲ್ಲದೆ ನಾವು ಮಾಡುವ ಕೆಲಸಕ್ಕೆ ಅರ್ಥವಾಗಲೀ ಗುರಿಯಾಗಲೀ ಇರುವುದಿಲ್ಲ. ಅಂಥ ದುಡಿಮೆಗೆ ಬದ್ಧತೆಯಾಗಲೀ ಪ್ರೀತಿಯ ಲೇಪನವಾಗಲೀ ಇರುವುದಿಲ್ಲ. ನಾವು ನಂಬಿರುವ ತತ್ತ್ವಗಳಿಗೆ ಪೂರಕವಾದ ಕ್ರಿಯೆಗಳಲ್ಲಿ ಗಾಢವಾದ ಶ್ರದ್ಧೆ ಸಹಜವಾಗಿ ಇರುತ್ತದೆ. ನಾವು ನಮ್ಮ ದೈನಂದಿನ ಅಗತ್ಯಗಳನ್ನು ಪೂರೈಸುವ ಸಾಮಾನ್ಯ ಕೆಲಸಗಳಿಂದ ಹಿಡಿದು ಕೌಟುಂಬಿಕ-ಸಾಮಾಜಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಜವಾಬ್ದಾರಿಯುತ ಕೆಲಸಗಳವರೆಗೆ ಶ್ರದ್ಧೆಯನ್ನು ತೋರಲೇಬೇಕು. ಸಾಮಾನ್ಯರು ವೈಯಕ್ತಿಕ ಆಸಕ್ತಿಗಳ ಪೂರೈಕೆಯ ಕೆಲಸಗಳಿಗೆ ತೋರುವ ಆಸಕ್ತಿಯನ್ನು ಸಮುದಾಯದ ಕೆಲಸಗಳಿಗೆ ತೋರದೆ ಇರಬಹುದು. ತಮ್ಮ ಹಿತಾಸಕ್ತಿಯನ್ನು ದಕ್ಕಿಸಿಕೊಳ್ಳುವ ಕೆಲಸದಲ್ಲೇ ಅಪಾರ ಶ್ರದ್ಧೆ ತೋರಬಹುದು. ಇಂಥವರಿಗೆ ಸಮುದಾಯದ ಸುಖದಲ್ಲಿ ಅಥವಾ ನೋವಿನಲ್ಲಿ ತಮ್ಮ ಪಾಲೂ ಇದೆ ಎಂಬುದು ಹೃದ್ಗತವಾಗದೆ ಹೋಗಬಹುದು. ಆದರೆ ಸಮುದಾಯ ಸುಖ ಅಥವಾ ದುಃಖ ತಮ್ಮ ವೈಯಕ್ತಿಕ ಬದುಕನ್ನು ಆಪೋಶನ ತೆಗೆದುಕೊಳ್ಳುತ್ತದೆ ಎಂಬ ಸತ್ಯ ಅರಿವಾಗುವುದರೊಳಗೆ ಕಾಲ ಮಿಂಚಿರುತ್ತದೆ.

ಸಮುದಾಯದ ಹಿತದ ಕೆಲಸಗಳಲ್ಲಿ ಸದಾ ಶ್ರದ್ಧೆಯನ್ನು ಹೊಂದಿ ದುಡಿಯುವ ವ್ಯಕ್ತಿ ಲೌಕಿಕ ಕಣ್ಣುಗಳಿಗೆ ಹುಚ್ಚನಂತೆ ವಿಚಿತ್ರವಾಗಿ ಕಾಣುತ್ತಾನೆ. ಸಾಕ್ರೆಟೀಸ್, ಗೆಲಿಲಿಯೋ, ಬುದ್ಧ, ಮಹಾತ್ಮ ಗಾಂಧಿಯಂಥವರು! ಅವರ ಸುತ್ತಮುತ್ತಲಿನ ಲೌಕಿಕರ ದೃಷ್ಟಿಯಲ್ಲಿ ಅಪ್ಪಟ ಕೆಲಸಕ್ಕೆ ಬಾರದವರೇ! ಆದರೆ ಅವರ ಶ್ರದ್ಧೆ ವ್ಯಕ್ತಿನೆಲೆಯನ್ನು ಮೀರಿ ಸಮುದಾಯದ ಭೌತಿಕ ಮತ್ತು ಬೌದ್ಧಿಕ ಅಭ್ಯುದಯದ ಬೆಳಕನ್ನು ಮೀರಿ ನಿಲ್ಲುವ ದುಡಿಮೆಯಲ್ಲಿತ್ತು. ಆದುದರಿಂದಲೇ ಅವರು ಕಾಲವಾದ ನಂತರವೂ ಬದುಕಿ ವರ್ತಮಾನದ ದಾರಿದೀಪವಾಗುತ್ತಿದ್ದಾರೆ. ಆದರೆ ವ್ಯಕ್ತಿ ನೆಲೆಯಲ್ಲಿ ಅಪಾರ ಶ್ರದ್ಧೆಯಿಟ್ಟು ದುಡಿದು ಕೇವಲ ತಮ್ಮ ಸುಖಕ್ಕಾಗಿಯೇ ಬದುಕಿದವರು, ನೀರ ಮೇಲಣ ಗುಳ್ಳೆಯಂತೆ ಅಂದಂದೇ ಮರೆಯಾಗುತ್ತಾರೆ! ಇದು ಕಟುಸತ್ಯವಾದರೂ ಮಾನವ ಅರ್ಥ ಮಾಡಿಕೊಳ್ಳಲಾಗದ ಬದುಕಿನ ಅತಿ ದೊಡ್ಡ ವ್ಯಂಗ್ಯವಾಗಿದೆ.

ಕುವೆಂಪು ಹೇಳುವಂತೆ ಭೂತವನ್ನು ಶೋಧಿಸಿ ವರ್ತಮಾನದ ಅಗತ್ಯತೆಗೆ ತಕ್ಕಂತೆ ಅದನ್ನು ಮಾರ್ಪಡಿಸುವ, ಒಗ್ಗಿಸಿಕೊಳ್ಳುವ ಕೆಲಸದಲ್ಲಿ ನಮ್ಮ ಶ್ರದ್ಧೆಯಿರಬೇಕು. ಹೊಸದನ್ನು ಶೋಧಿಸುವ, ಆ ಮೂಲಕ ಕಂಡುಕೊಂಡ ಸತ್ಯವನ್ನು ಅರಗಿಸಿಕೊಳ್ಳುವ ಮತ್ತು ಆ ಸತ್ಯವನ್ನು ತನ್ನ ಸುತ್ತಮುತ್ತಲಿನ ಸಮಾಜಕ್ಕೆ ಅರ್ಥೈಸಿಸುವ ಕೆಲಸದಲ್ಲಿ ಅಪಾರವಾದ ಶ್ರದ್ಧೆಯ ದುಡಿಮೆಯಿರಬೇಕು. ಏಕೆಂದರೆ ನಮ್ಮ ಸಮಾಜ ಭೂತಕಾಲದ ಮೌಲ್ಯಗಳನ್ನು ಒಪ್ಪಿ ಅಪ್ಪಿಕೊಳ್ಳುವಲ್ಲಿ ತೋರುವ ಶ್ರದ್ಧೆಯನ್ನು ಸತ್ಯದ ಹಾದಿಯ ಬೆಳಕುಗಳಲ್ಲಿ ತೋರುವುದಿಲ್ಲ. ಏಕೆಂದರೆ ಒಪ್ಪಿತ ಮೌಲ್ಯಗಳನ್ನು ಒಪ್ಪಿ ನಡೆಯುವುದರಲ್ಲಿ ಸಂಘರ್ಷವಿರುವುದಿಲ್ಲ. ಅದರಲ್ಲಿ ಲಾಭವಿದೆ. ಆಧುನಿಕ ಸತ್ಯಗಳು ಪ್ರಮಾಣವನ್ನು ಬೇಡುತ್ತವೆ; ಸಾಕ್ಷಿ ಪುರಾವೆಗಳನ್ನು ಕೇಳುತ್ತವೆ. ಸತ್ಯದ ಬೆಳಕು ಸಮಾನತೆಯನ್ನು ಸೂಸುತ್ತದೆ. ಅದಕ್ಕೆ ಜನಾಂಗ, ಜಾತಿ, ಮತ ಮತ್ತು ಲಿಂಗಗಳ ತಾರತಮ್ಯವಿಲ್ಲ. ಅದು ಕಾಯಕದ ಅಸಮಾನತೆಯನ್ನು ಲಕ್ಷಿಸುವುದಿಲ್ಲ; ಭೇದವನ್ನು ಕಾಣುವುದಿಲ್ಲ. ಆದರೆ ಒಪ್ಪಿತ ಮೌಲ್ಯಗಳು ಕೇವಲ ನಂಬಿಕೆಯನ್ನು ಕೇಳುತ್ತವೆ; ಆ ನಂಬಿಕೆಯಲ್ಲಿ ಶ್ರದ್ಧೆಯಿಡುವಂತೆ ಹೇಳುತ್ತವೆ. ಅವು ಪ್ರಶ್ನೆ ಮಾಡುವುದನ್ನು ಸಹಿಸುವುದಿಲ್ಲ. ಅವು ನಿರೀಕ್ಷೆ ಮಾಡುವುದು ಕೇವಲ ಅಂಧ ಶ್ರದ್ಧೆಯನ್ನು!

ಈ ಅಂಧ ಶ್ರದ್ಧೆಯೆನ್ನುವುದು ವ್ಯಕ್ತಿಯನ್ನು ಯಾವ ಮಟ್ಟಕ್ಕೆ ಕರೆದೊಯ್ಯುತ್ತದೆಯೆಂದರೆ- ಅವೈಜ್ಞಾನಿಕ- ಅವೈಚಾರಿಕ ಒಪ್ಪಿತ ಮೌಲ್ಯಗಳು ಹೇಳುವ ಕೆಲಸವನ್ನು ಮಾಡುವುದರಲ್ಲಿ ಸಮಾಜಕ್ಕೆ ಹಾಗೂ ತನಗೆ ಒಳ್ಳೆಯದಾಗುತ್ತದೆಯೆಂಬ ಗಾಢ ನಂಬಿಕೆ ಅವನಲ್ಲಿ ಬೆಳೆದುಬಿಟ್ಟಿರುತ್ತದೆ. ಆದುದರಿಂದಲೇ ಅವನು ಅವುಗಳು ಹೇಳುವ ಮೌಲ್ಯಗಳನ್ನು ಈಡೇರಿಸಲು ನೂರಾರು ಜನರನ್ನು ಬಲಿತೆಗೆದುಕೊಳ್ಳಲು, ಸಾವಿರಾರು ಜನರ ಬದುಕಿನ ಸೌಖ್ಯವನ್ನು ಇಲ್ಲವಾಗಿಸಲು ಮುಂದಾಗುತ್ತಾನೆ. ಅಷ್ಟೇ ಅಲ್ಲ, ಆ ಕಾಯಕದಲ್ಲಿ ಹುತಾತ್ಮನಾಗಲು ಸಿದ್ಧನಾಗುತ್ತಾನೆ. ಅವನು ಎಂಥ ಹುಸಿ- ಅಂಧಶ್ರದ್ಧೆಯಲ್ಲಿ ಬದುಕುತ್ತಿರುತ್ತಾನೆಂದರೆ- ಇಂಥ ಮಾನವ ವಿರೋಧಿ ಅಸಮಾನತಾ ಸಮಾಜ ರೂಪಿಸುವ ಕೆಲಸದಲ್ಲಿ ತಾನು ಬಲಿಯಾದರೆ- ಸ್ವರ್ಗದಲ್ಲಿ ತನಗಾಗಿ ಕಪ್ಪುಕಂಗಳ ಕಪ್ಪುಕೂದಲ ಸುರ ಸುಂದರಾಂಗಿಯರು ಕಾದಿರುತ್ತಾರೆಂದು ನಂಬುತ್ತಾನೆ. 'ಗೆದ್ದರೆ ಜಯ, ಸತ್ತರೆ ವೀರ ಸ್ವರ್ಗ' ಎಂಬ ಹುಸಿ ನಂಬಿಕೆಯಲ್ಲಿ ಶ್ರದ್ಧೆಯಿಟ್ಟು ಮತಾಂಧನಾಗಲೂ ಅವನು ಹಿಂಜರಿಯುವುದಿಲ್ಲ. ಇದು ಬದುಕಿನ ವಿಷಾದಮಯ ಅಂತ್ಯವೆಂದು ಅವನಿಗೆ ಅನಿಸುವುದೂ ಇಲ್ಲ.

■ **ಶಿಕಾಕು**

## ಮಾತೇ ಮುತ್ತು

★ ನಾಳೆ ಎನ್ನುವವರು ಇವರು ಮೂವರೇ: ದರ್ಜಿ, ಅಕ್ಕಸಾಲಿಗ, ಅಗಸ.

-ಬೀಚಿ

★ ಕುಟುಂಬ ಭ್ರಷ್ಟಾಚಾರದಲ್ಲಿ ನಿರತನಾದ ರಾಜಕಾರಣಿ ತನ್ನ ಜಾತಿಯ ನೆಪದಲ್ಲಿ ಮುಂದೆ ಬರಲು ಯತ್ನಿಸಿದರೆ ಅವನಿಗೆ ಲಾಭವೇ ಹೊರತು, ಅವನ ಜಾತಿಯ ಸಾಮಾನ್ಯ ಜನರಿಗೆ ಕವಡೆ ಕಾಸಿನ ಪ್ರಯೋಜನ ಇಲ್ಲ. ಏನಾದರೂ ಲಾಭವಾದರೆ ಅವನ ಭಟ್ಟಂಗಿಗಳಿಗೆ ಅಥವಾ ಕೆಲವು ಸಿರಿವಂತರಿಗೆ ಮಾತ್ರ.

-ಅನುಭವಾಮೃತ

★ ಮಾನವರ ವ್ಯಕ್ತಿತ್ವಕ್ಕೆ ಗೌರವ ತೋರಿಸದ ಯಾವುದೇ ಸಮಾಜವು ದರೋಡೆಕೋರರ ಒಂದು ತಂಡ ಅಷ್ಟೆ.

-ಬಿ.ಆರ್.ಅಂಬೇಡ್ಕರ್

★ ದಯೆಯಿಲ್ಲದಿರುವುದು, ಕಾರಣವಿಲ್ಲದೆ ಜಗಳವಾಡುವುದು, ಪರರ ಹಣ ಮತ್ತು ಹೆಂಡತಿಯನ್ನು ಆಸೆಪಡುವುದು, ಸ್ವಜನರಲ್ಲಿ ಮತ್ತು ಬಂಧುಗಳಲ್ಲಿ ಸಹನೆಯಿಲ್ಲದಿರುವಿಕೆ- ಈ ಗುಣಗಳು ದುರ್ಜನರಿಗೆ ಸ್ವಭಾವಸಿದ್ಧ.

-ನೀತಿಶತಕ

★ ರೆಕ್ಕೆಗಳಿಲ್ಲದ ಹಕ್ಕಿ, ಒಣಗಿದ ಮರ, ನೀರಿಲ್ಲದ ಸರೋವರ, ಹಲ್ಲುಕಿತ್ತ ಹಾವು, ಬಡವ- ಎಲ್ಲರೂ ಒಂದೇ.

-ಮೃಚ್ಛಕಟಿಕ

★ ಉಪದೇಶದಿಂದ ಪ್ರಯೋಜನ ಪಡೆಯಲು ಅದನ್ನು ಕೊಡಲು ಬೇಕಾದ ಬುದ್ಧಿಗಿಂತ ಹೆಚ್ಚಿನ ಬುದ್ಧಿ ಬೇಕು.

-ಆಫ್ರಿಕಾ ಗಾದೆ

★ ಲೋಕೋದ್ಧಾರಕ್ಕಾಗಿ ಕೆಲಸ ಮಾಡುತ್ತಿದ್ದೇವೆಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ಪ್ರಯತ್ನ ನಮ್ಮ ಏಳ್ಗೆಗಾಗಿ- ನಮ್ಮ ಬಾಳಿನ ಸಫಲತೆಗಾಗಿ- ನಮ್ಮ ಜೀವನ ಸಂಸ್ಕಾರಕ್ಕಾಗಿ.

-ಡಿ.ವಿ.ಜಿ.

★ ನಾನು ಬರೆಯುತ್ತೇನೆ ಖುಷಿಗೆ, ನೋವಿಗೆ, ರೊಚ್ಚಿಗೆ ಮತ್ತು ಹುಚ್ಚಿಗೆ ಅಥವಾ ನಂದಿಸಲಾರದ ಕಿಚ್ಚಿಗೆ.

-ಜಿ.ಎಸ್.ಶಿವರುದ್ರಪ್ಪ

★ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ. ಸುಳ್ಳು ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟ.

-ಎಂ.ಎಂ.ಕಲಬುರ್ಗಿ

★ ನಾವು ಪ್ರತಿಯೊಬ್ಬರೂ ನೂರಾರು ಕಾಲ, ನೂರಾರು ದೇಶಗಳನ್ನು ಹೊತ್ತಿದ್ದೇವೆ. ಸಾವಿರ, ಲಕ್ಷ, ಕೋಟಿ ಜನರ ಋಣದಿಂದ ಬಾಳುತ್ತಿದ್ದೇವೆ.

-ಹಾ.ಮಾ. ನಾಯಕ

★ ಮುಚ್ಚಬೇಕಾಗಿರುವುದು ಕನ್ನಡ ಶಾಲೆಗಳನ್ನಲ್ಲ; ಅನಧಿಕೃತ ಇಂಗ್ಲಿಷ್ ಶಾಲೆಗಳನ್ನು.

-ದೇವನೂರು ಮಹಾದೇವ

★ ಏಕಾಂತ ಎಂದರೆ ಎಲ್ಲರನ್ನೂ ಬಿಟ್ಟು ಒಂಟಿಯಾಗಿರುವುದಲ್ಲ, ಅದು ಒಳಗಿನ ಏಕಾಂತ. ಎಲ್ಲೇ ಇರಲಿ, ಯಾರೊಡನೆಯೇ ಇರಲಿ- ಅಂತಹ ಏಕಾಂತ ಸಾಧ್ಯ.

-ಮೇಸ್ಟರ್ ಎಕ್‌ಹಾರ್ಟ್

★ ಇತರರು ನಿನಗೆ ಏನು ಮಾಡಬಾರದೆಂದು ಅಪೇಕ್ಷಿಸುತ್ತೀಯೋ, ಅಂತಹುದನ್ನು ನೀನೂ ಇತರರಿಗೆ ಮಾಡಬೇಡ.

-ಕನ್‌ಫ್ಯೂಷಿಯಸ್